

ಮಿತ್ರಾ,

ಈ ಪತ್ರ ಕೈ ಸೇರುವಾಗ ಆಶ್ಚರ್ಯವೆನಿಸಬಹುದು... ತುಂಬಾ ಸಮಯದ ಬಳಿಕ ಬರೆಯುತ್ತಿದ್ದೇನೆ...

ಪತ್ರಗಳ ಮೂಲಕ ಮಾತನಾಡಿಲ್ಲವಾದರೂ ನಾವು ಪರಸ್ಪರ ಅಗಲಲಾರೆವು ಎಂಬ ನಂಬಿಕೆ ನನಗಿದೆ. ನನ್ನ ಹೃದಯ ರಹಸ್ಯಗಳ ಆಳದ ಸೆಳೆತಗಳನ್ನು ಯಾರಾದರೂ ಒಬ್ಬರಲ್ಲಿ ಸ್ವಲ್ಪವಾದರೂ ತೋರಿಸಿಕೊಟ್ಟಿದ್ದರೆ ಅದು ನಿಮ್ಮಲ್ಲಿ ಮಾತ್ರ... ಆತ್ಮೀಯ ಗೆಳೆಯನೆಂಬ ಹೆಸರು ಹೇಳಿ ನಡೆಯುವ ಎಷ್ಟು ಜನರ ನಡುವೆ ರಹಸ್ಯಗಳ ಒಂದು ಜಗತ್ತೇ ನೆಲೆನಿಂತಿದೆ! ಆದರೆ, ನಾವು ಹೆಚ್ಚು ಕಡಿಮೆ ಇದಕ್ಕೊಂದು ಅಪವಾದ... ಅಭಿಮಾನಪೂರ್ವಕವಾಗಿ ನಾನೀ ವಾಸ್ತವವನ್ನು ನೆನೆಯುತ್ತೇನೆ.

ಇದನ್ನೆಲ್ಲ ಹೇಳಲು ಕಾರಣವೇನೆಂದು ನೀವೀಗ ಯೋಚಿಸುತ್ತಿರಬಹುದು... ಹೇಳುತ್ತೇನೆ. ನನ್ನ ಆಲೋಚನೆಗಳಿಗೆ ಬೆಂಕಿ ಹತ್ತಿದ ಅನುಭವವಾಗುತ್ತಿದೆ. ಹೃದಯದ ಪ್ರತಿಯೊಂದು ಮೂಲೆಗೂ ಇದು ಜ್ವಲಿಸಿ ಜ್ವಲಿಸಿ ಹಬ್ಬುತ್ತಿದೆ...

ಮರಣ ಮರಗಟ್ಟಿದ ದೇಹವನ್ನು ದುಃಖದಿಂದ ತಬ್ಬಿಕೊಳ್ಳಲು ಕೈಗಳನ್ನು ಮುಂಚಾಚಿದ ಒಬ್ಬ ಮನುಷ್ಯನಿದನ್ನು ಬರೆಯುತ್ತಿದ್ದಾನೆಂಬುದನ್ನು ನೆನಪಿಸಿಕೊಳ್ಳಬೇಕು... ನೀವು ಸಂಶಯಪಡುವುದು ಸಹಜ... ನಾವು ಅಹಂ ಅಳಿದು ಅನುಗ್ರಹಿಸಿಲ್ಲವಾದರೆ ಬದುಕಿನ ಕಟ್ಟುಪಾಡುಗಳನ್ನು ಕಿತ್ತೆಸೆಯದೆ ಪರಿಹಾರವಿಲ್ಲವಲ್ಲವೇ... ಸಾವು ನನಗೀಗ